5 △ CCE PF/NSR & NSPR(C)/500/6671

ಒಟ್ಟು ಮುದ್ರಿತ ಪುಟಗಳ ಸಂಖ್ಯೆ : 12 ]

Total No. of Printed Pages : 12 ]

ಒಟ್ಟು ಪ್ರಶ್ನೆಗಳ ಸಂಖ್ಯೆ : 57 ]

Total No. of Questions : 57 ]

**ಸಂಕೇತ ಸಂಖ್ಯೆ : 97-K**

**Code No. : 97-K**

# C

**CCE PF**
**UNREVISED**
**FULL SYLLABUS**
**NSR & NSPR**

Question Paper Serial No. **500**

# ವಿಷಯ : ರಾಜ್ಯಶಾಸ್ತ್ರ

# Subject : POLITICAL SCIENCE

**(ಕನ್ನಡ ಮಾಧ್ಯಮ / Kannada Medium)**

**(ಖಾಸಗಿ ಅಭ್ಯರ್ಥಿ / ಎನ್.ಎಸ್.ಆರ್. & ಎನ್.ಎಸ್.ಪಿ.ಆರ್.)**

**(Private Fresh / NSR & NSPR)**

ದಿನಾಂಕ : 10. 04. 2023 ] [ Date : 10. 04. 2023

ಸಮಯ : ಬೆಳಗ್ಗೆ 10-30 ರಿಂದ ಮಧ್ಯಾಹ್ನ 1-45 ರವರೆಗೆ ] [ Time : 10-30 A.M. to 1-45 P.M.

ಗರಿಷ್ಠ ಅಂಕಗಳು : 100 ] [ Max. Marks : 100

***ಪರೀಕ್ಷಾರ್ಥಿಗಾಗಿ ಸಾಮಾನ್ಯ ಸೂಚನೆಗಳು :***

1. ಈ ಪ್ರಶ್ನೆಪತ್ರಿಕೆಯು ವಸ್ತುನಿಷ್ಠ ಮತ್ತು ವಿಷಯನಿಷ್ಠ ಮಾದರಿಯ ಒಟ್ಟು 57 ಪ್ರಶ್ನೆಗಳನ್ನು ಹೊಂದಿದೆ.
2. ಈ ಪ್ರಶ್ನೆಪತ್ರಿಕೆಯನ್ನು ಹಿಮ್ಮುಖ ಜಾಕೆಟ್ ಮೂಲಕ ಮೊಹರು (ಸೀಲ್) ಮಾಡಲಾಗಿದೆ. ಪರೀಕ್ಷೆ ಪ್ರಾರಂಭವಾಗುವ ಸಮಯಕ್ಕೆ ನಿಮ್ಮ ಪ್ರಶ್ನೆಪತ್ರಿಕೆಯ ಬಲಬದಿ ಪಾರ್ಶ್ವವನ್ನು ಕತ್ತರಿಸಿ, ಪ್ರಶ್ನೆಪತ್ರಿಕೆಯಲ್ಲಿ ಎಲ್ಲಾ ಪುಟಗಳು ಇವೆಯೇ ಎಂದು ಪರೀಕ್ಷಿಸಿಕೊಳ್ಳಿ.
3. ವಸ್ತುನಿಷ್ಠ ಮತ್ತು ವಿಷಯನಿಷ್ಠ ಮಾದರಿಯ ಪ್ರಶ್ನೆಗಳಿಗೆ ಕೊಟ್ಟಿರುವ ಸೂಚನೆಗಳನ್ನು ಪಾಲಿಸಿ.
4. ಬಲ ಭಾಗದಲ್ಲಿ ಕೊಟ್ಟಿರುವ ಅಂಕಿಗಳು ಪ್ರಶ್ನೆಗಳಿಗಿರುವ ಪೂರ್ಣ ಅಂಕಗಳನ್ನು ತೋರಿಸುತ್ತವೆ.
5. ಪ್ರಶ್ನೆಪತ್ರಿಕೆಯನ್ನು ಓದಿಕೊಳ್ಳಲು 15 ನಿಮಿಷಗಳ ಕಾಲಾವಕಾಶವು ಸೇರಿದಂತೆ, ಉತ್ತರಿಸಲು ನಿಗದಿಪಡಿಸಲಾದ ಸಮಯವನ್ನು ಪ್ರಶ್ನೆಪತ್ರಿಕೆಯ ಮೇಲ್ಭಾಗದಲ್ಲಿ ನೀಡಲಾಗಿದೆ.

ಇಲ್ಲಿಂದ ಕತ್ತರಿಸಿ

**TEAR HERE TO OPEN THE QUESTION PAPER**
ಪ್ರಶ್ನೆಪತ್ರಿಕೆಯನ್ನು ತೆರೆಯಲು ಇಲ್ಲಿ ಕತ್ತರಿಸಿ

**Tear here**

[ Turn over

**I. ಕೆಳಗಿನ ಪ್ರಶ್ನೆಗಳಿಗೆ ಅಥವಾ ಅಪೂರ್ಣ ಹೇಳಿಕೆಗಳಿಗೆ ನಾಲ್ಕು ಆಯ್ಕೆಗಳನ್ನು ನೀಡಲಾಗಿದೆ. ಅವುಗಳಲ್ಲಿ ಸೂಕ್ತವಾದ ಒಂದು ಉತ್ತರವನ್ನು ಆರಿಸಿ, ಅದರ ಕ್ರಮಾಕ್ಷರದೊಂದಿಗೆ ಬರೆಯಿರಿ :**

**10 × 1 = 10**

1. ಭಾರತದಲ್ಲಿ ಸಂವಿಧಾನ ಕರಡು ರಚನಾ ಸಮಿತಿಯ ಅಧ್ಯಕ್ಷರು

   (A) ಡಾ. ಬಾಬುರಾಜೇಂದ್ರ ಪ್ರಸಾದ್

   (B) ಬಿ.ಎನ್. ರಾವ್

   (C) ಕೆ.ಎಂ. ಮುನ್ಷಿ

   (D) ಡಾ. ಬಿ.ಆರ್. ಅಂಬೇಡ್ಕರ್

2. ನಮ್ಮ ಸಂವಿಧಾನದ ಆತ್ಮ

   (A) ವಿಧಿಗಳು

   (B) ಪ್ರಸ್ತಾವನೆ

   (C) ಮೂಲಭೂತ ಹಕ್ಕುಗಳು

   (D) ಮೂಲಭೂತ ಕರ್ತವ್ಯಗಳು

3. ಪ್ರಸ್ತುತ ಭಾರತದ ಪ್ರತಿಯೊಬ್ಬ ಪ್ರಜೆಗೂ ಸಂವಿಧಾನ ನೀಡಿರುವ ಮೂಲಭೂತ ಹಕ್ಕುಗಳು

(A) 6

(B) 7

(C) 8

(D) 9

4. ಭಾರತದ ರಾಜ್ಯನೀತಿ ನಿರ್ದೇಶಕ ತತ್ವಗಳನ್ನು ಎರವಲು ಪಡೆದಿರುವುದು

(A) ಇಂಗ್ಲೆಂಡ್ ಸಂವಿಧಾನದಿಂದ

(B) ಅಮೆರಿಕ ಸಂವಿಧಾನದಿಂದ

(C) ಜಪಾನ್ ಸಂವಿಧಾನದಿಂದ

(D) ಐರ್ಲೆಂಡ್ ಸಂವಿಧಾನದಿಂದ

5. ಭಾರತದ ಉಪರಾಷ್ಟ್ರಪತಿಯಾಗಲು ಕನಿಷ್ಠ ವಯಸ್ಸು

(A) 25 ವರ್ಷಗಳು

(B) 30 ವರ್ಷಗಳು

(C) 35 ವರ್ಷಗಳು

(D) 21 ವರ್ಷಗಳು

6. ರಾಜ್ಯಸಭಾ ಸದಸ್ಯರ ಅಧಿಕಾರಾವಧಿ

(A) 4 ವರ್ಷಗಳು

(B) 5 ವರ್ಷಗಳು

(C) 6 ವರ್ಷಗಳು

(D) 2 ವರ್ಷಗಳು

7. ಸರ್ವೋಚ್ಚ ನ್ಯಾಯಾಲಯದ ನ್ಯಾಯಾಧೀಶರಿಗೆ ಪ್ರಮಾಣವಚನ ನೀಡುವವರು

(A) ಪ್ರಧಾನ ಮಂತ್ರಿಗಳು

(B) ಭಾರತದ ಮುಖ್ಯ ನ್ಯಾಯಾಧೀಶರು

(C) ರಾಜ್ಯಸಭಾಧ್ಯಕ್ಷರು

(D) ರಾಷ್ಟ್ರಪತಿಗಳು

8. ರಾಜ್ಯಪಾಲರ ಅಧಿಕಾರಾವಧಿ

(A) 2 ವರ್ಷಗಳು

(B) 4 ವರ್ಷಗಳು

(C) 5 ವರ್ಷಗಳು

(D) 6 ವರ್ಷಗಳು

9. ಇವುಗಳಲ್ಲಿ ವಿಧಾನ ಪರಿಷತ್ತನ್ನು ಹೊಂದಿರುವ ರಾಜ್ಯ

(A) ಕರ್ನಾಟಕ

(B) ತಮಿಳುನಾಡು

(C) ಕೇರಳ

(D) ಗೋವಾ

10. ಭೂಕಂದಾಯ ದಾಖಲೆಗಳ ಸಂರಕ್ಷಣೆ, ತೆರಿಗೆ ವಸೂಲಾತಿ ಮತ್ತು ಜಮಾ ಬಂದಿಗೆ ಸಂಬಂಧಿಸಿದ ಪ್ರಕರಣಗಳನ್ನು ಇತ್ಯರ್ಥಗೊಳಿಸುವುದು

(A) ಲೋಕ ಅದಾಲತ್

(B) ಸೆಷನ್ಸ್ ನ್ಯಾಯಾಲಯ

(C) ಉಚ್ಚ ನ್ಯಾಯಾಲಯ

(D) ಕಂದಾಯ ನ್ಯಾಯಾಲಯ

**II.** 11. ***A*-ಪಟ್ಟಿಯಲ್ಲಿರುವ ರಾಜ್ಯ, ರಾಷ್ಟ್ರಗಳೊಂದಿಗೆ ಅವುಗಳ ಕೆಳಮನೆಗಳನ್ನು *B*-ಪಟ್ಟಿಯಲ್ಲಿ ನೀಡಲಾಗಿದ್ದು ಸರಿಯಾಗಿ ಹೊಂದಿಸಿ, ಉತ್ತರವನ್ನು ಕ್ರಮಾಕ್ಷರದೊಂದಿಗೆ ಬರೆಯಿರಿ : 5 × 1 = 5**

| ***A*-ಪಟ್ಟಿ** | | ***B*-ಪಟ್ಟಿ** | |
|---|---|---|---|
| (A) | ಅಮೆರಿಕಾ ಸಂಯುಕ್ತ ಸಂಸ್ಥಾನ | (i) | ಫೆಡರಲ್ ಅಸೆಂಬ್ಲಿ |
| (B) | ಬ್ರಿಟನ್ | (ii) | ಲೋಕಸಭೆ |
| (C) | ಭಾರತ | (iii) | ಹೌಸ್ ಆಫ್ ಕಾಮನ್ಸ್ |
| (D) | ರಷ್ಯಾ | (iv) | ವಿಧಾನಸಭೆ |
| (E) | ಕರ್ನಾಟಕ | (v) | ಹೌಸ್ ಆಫ್ ರೆಪ್ರಸೆಂಟೇಟಿವ್ಸ್ |
| | | (vi) | ರಾಜ್ಯಸಭೆ |
| | | (vii) | ವಿಧಾನ ಪರಿಷತ್ |

**III. ಈ ಕೆಳಗಿನ ಪ್ರಶ್ನೆಗಳಿಗೆ ಒಂದೊಂದು ವಾಕ್ಯದಲ್ಲಿ ಉತ್ತರ ಬರೆಯಿರಿ : 15 × 1 = 15**

12. ನಮ್ಮ ಸಂವಿಧಾನ ಜಾರಿಗೆ ಬಂದದ್ದು ಯಾವಾಗ ?

13. ಇಂಗ್ಲೆಂಡ್ ಪ್ರಜಾಪ್ರಭುತ್ವ ರಾಷ್ಟ್ರವಾದರೂ ಗಣರಾಜ್ಯವಲ್ಲ. ಏಕೆ ?

14. 1978 ರ ತೆಗೆಯಲ್ಪಟ್ಟ ಮೂಲಭೂತ ಹಕ್ಕು ಯಾವುದು ?

15. ಬಂಧೀ ಪ್ರತ್ಯಕ್ಷೀರಣ (ಹೆಬಿಯಸ್ ಕಾರ್ಪಸ್) ಎಂದರೇನು ?

16. ಗಾಂಧಿವಾದಿ ತತ್ವಗಳೆಂದರೇನು ?

17. ಒಂದು ಉದಾರವಾದಿ ತತ್ವವನ್ನು ತಿಳಿಸಿ.

18. ಭಾರತದ ಮೊದಲ ಮಹಿಳಾ ರಾಷ್ಟ್ರಾಧ್ಯಕ್ಷರು ಯಾರು ?

19. ನಮ್ಮ ಕೇಂದ್ರೀಯ ಶಾಸಕಾಂಗವನ್ನು ಏನೆಂದು ಕರೆಯಲಾಗಿದೆ ?

20. ಲೋಕಸಭೆಯ ಸದಸ್ಯರ ಅಧಿಕಾರದ ಅವಧಿ ಎಷ್ಟು ?

21. ಅವಿಶ್ವಾಸ ನಿರ್ಣಯ ಎಂದರೇನು ?

22. ಸರ್ವೋಚ್ಚ ನ್ಯಾಯಾಲಯದ ನ್ಯಾಯಾಧೀಶರ ನಿವೃತ್ತಿ ವಯಸ್ಸು ಎಷ್ಟು ?

23. ನಮ್ಮ ಸಂವಿಧಾನದ 32 ನೆಯ ವಿಧಿಯ ಪ್ರಾಮುಖ್ಯತೆ ಏನು ?

24. ರಾಜ್ಯಪಾಲರನ್ನು ಯಾರು ನೇಮಕ ಮಾಡುತ್ತಾರೆ ?

25. ಮಹಾಭಿಯೋಗ ಎಂದರೇನು ?

26. ಈಶಾನ್ಯ ರಾಜ್ಯಗಳ ಜಂಟಿ ಲೋಕಸೇವಾ ಆಯೋಗ ಎಲ್ಲಿದೆ ?

**IV. ಈ ಕೆಳಗಿನ ಪ್ರಶ್ನೆಗಳಿಗೆ ಎರಡರಿಂದ ನಾಲ್ಕು ವಾಕ್ಯಗಳಲ್ಲಿ ಅಥವಾ ಅಂಶಗಳಲ್ಲಿ ಉತ್ತರಿಸಿ :**

**24 × 2 = 48**

27. ರಾಜ್ಯನೀತಿ ನಿರ್ದೇಶಕ ತತ್ವಗಳು ಮತ್ತು ಮೂಲಭೂತ ಹಕ್ಕುಗಳ ನಡುವಿನ ಯಾವುದಾದರೂ ಎರಡು ವ್ಯತ್ಯಾಸಗಳನ್ನು ತಿಳಿಸಿ.

28. ರಾಜ್ಯವು ಸಮಾಜವಾದಿ ತತ್ವಗಳ ನಿರ್ದೇಶಾತ್ಮಕ ತತ್ವಗಳನ್ನು ಪರಿಣಾಮಕಾರಿಯಾಗಿ ಕಾರ್ಯಗತಗೊಳಿಸಿದರೆ ಸಾಮಾಜಿಕ ನ್ಯಾಯ ದೊರಕುವುದು. ವಿವರಿಸಿ.

29. ರಾಜ್ಯನೀತಿ ನಿರ್ದೇಶಕ ತತ್ವಗಳ ಲಕ್ಷಣಗಳೇನು ?

30. ಭಾರತದಲ್ಲಿ ಪರೋಕ್ಷ ಚುನಾವಣಾ ವಿಧಾನವನ್ನು ಮುಖ್ಯವಾಗಿ ಯಾವಾಗ ಬಳಸಲಾಗುತ್ತದೆ ?

31. ರಾಷ್ಟ್ರಪತಿಗಳಿಗಿರುವ ತುರ್ತು ಪರಿಸ್ಥಿತಿ ಅಧಿಕಾರಗಳು ಯಾವುವು ?

32. ಇವರುಗಳನ್ನು ಭಾರತದ ಪ್ರಧಾನ ಮಂತ್ರಿಯಾಗಿ ಕಾಲಾನುಕ್ರಮದಲ್ಲಿ ಆರಿಸಿ ಬರೆಯಿರಿ :

a) ಲಾಲ್ ಬಹದ್ದೂರ್ ಶಾಸ್ತ್ರಿ

b) ಜವಾಹರಲಾಲ್ ನೆಹರೂ

c) ನರೇಂದ್ರ ಮೋದಿ

d) ರಾಜೀವ್ ಗಾಂಧಿ

33. ರಾಜ್ಯಸಭೆಯ ರಚನೆಯ ಬಗ್ಗೆ ಬರೆಯಿರಿ.

34. ಸರ್ವೋಚ್ಚ ನ್ಯಾಯಾಲಯವು ದಾಖಲೆಗಳ ನ್ಯಾಯಾಲಯವಾಗಿ ಹೊಂದಿರುವ ಅಧಿಕಾರಗಳಾವುವು ?

35. ವಿಧಾನ ಪರಿಷತ್‌ನ ಅವಶ್ಯಕತೆ ಏನು ?

36. ವಿಧಾನಸಭೆಯನ್ನು ರಜ್ಯಾಪಾಲರು ಯಾವಾಗ ವಿಸರ್ಜಿಸಬಹುದು ?

37. ಉಚ್ಚ ನ್ಯಾಯಾಲಯದ ನ್ಯಾಯಾಧೀಶರಾಗಲು ಇರಬೇಕಾದ ಅರ್ಹತೆಗಳೇನು ?

38. ಉಚ್ಚ ನ್ಯಾಯಾಲಯವು ತನ್ನ ಅಧೀನ ನ್ಯಾಯಾಲಯಗಳನ್ನು ಹೇಗೆ ನಿಯಂತ್ರಿಸುತ್ತದೆ ?

39. ಜಿಲ್ಲಾ ಪಂಚಾಯಿತಿಯ ಸ್ಥಾಯಿ ಸಮಿತಿಗಳನ್ನು ಹೆಸರಿಸಿ.

40. ರಾಜ್ಯ ಲೋಕಸೇವಾ ಆಯೋಗದ ಸದಸ್ಯರಾಗಲು ಇರಬೇಕಾದ ಅರ್ಹತೆಗಳೇನು ?

41. 1919 ರ ಕಾಯ್ದೆಯ ಸುಧಾರಣೆಗಳು ಯಾವುವು ?

42. ಮೂಲಭೂತ ಹಕ್ಕುಗಳ ಲಕ್ಷಣಗಳನ್ನು ಬರೆಯಿರಿ.

43. ಮಾಹಿತಿ ಹಕ್ಕು ಕಾಯ್ದೆಯನ್ನು ವಿವರಿಸಿ.

44. ಪ್ರತಿಬಂಧಕಾಜ್ಞೆಯನ್ನು (Prohibition) ವಿವರಿಸಿ.

45. ಕೇಂದ್ರ ಕಾರ್ಯಾಂಗದ ಮಂತ್ರಿಗಳ ವಿಧಗಳನ್ನು ತಿಳಿಸಿ.

46. ರಾಜ್ಯಸಭೆಯ ಅಧಿವೇಶನದ ವಿಧಗಳನ್ನು ಹೆಸರಿಸಿ.

47. ಕಂದಾಯ ನ್ಯಾಯಾಲಯಗಳನ್ನು ಹೆಸರಿಸಿ.

48. ನಗರ ಸಭೆಗಳ ದಕ್ಷ ಆಡಳಿತ ನಿರ್ವಹಣೆಗಾಗಿ ರಚಿಸಿರುವ ಸ್ಥಾಯಿ ಸಮಿತಿಗಳು ಯಾವುವು ?

49. ರಾಜ್ಯ ಮುಖ್ಯಮಂತ್ರಿಗಳಾಗಲು ಇರಬೇಕಾದ ಅರ್ಹತೆಗಳು ಯಾವುವು ?

50. 1861 ರ ಕಾಯ್ದೆಯು ಜಾರಿಗೆ ತಂದ ಸುಧಾರಣೆಗಳು ಯಾವುವು ?

**V. ಈ ಕೆಳಗಿನ ಪ್ರಶ್ನೆಗಳಿಗೆ ಮೂರರಿಂದ ಆರು ವಾಕ್ಯಗಳಲ್ಲಿ ಅಥವಾ ಅಂಶಗಳಲ್ಲಿ ಉತ್ತರಿಸಿ :** **6 × 3 = 18**

51. ನಮ್ಮ ಸಂವಿಧಾನದ ಪ್ರಸ್ತಾವನೆಯ ಮುಖ್ಯಾಂಶಗಳೇನು ?

52. ನಮ್ಮ ಸಂವಿಧಾನ ನೀಡಿರುವ ಮೂಲಭೂತ ಹಕ್ಕುಗಳಾವುವು ?

53. ಲೋಕಸಭಾಪತಿಗಳ ಅಧಿಕಾರ ಮತ್ತು ಕಾರ್ಯಗಳು ಯಾವುವು ?

54. ಸರ್ವೋಚ್ಚ ನ್ಯಾಯಾಲಯದ ಅಧಿಕಾರಗಳು ಯಾವುವು ?

55. ರಾಜ್ಯಪಾಲರ ಶಾಸನೀಯ ಅಧಿಕಾರಗಳು ಯಾವುವು ?

56. ಕರ್ನಾಟಕ ಲೋಕಸೇವಾ ಆಯೋಗವು ನಿರ್ವಹಿಸುವ ಕಾರ್ಯಗಳು ಯಾವುವು ?

**VI. ಈ ಪ್ರಶ್ನೆಗೆ ಎಂಟು ವಾಕ್ಯಗಳಲ್ಲಿ ಅಥವಾ ಅಂಶಗಳಲ್ಲಿ ಉತ್ತರಿಸಿ :** **1 × 4 = 4**

57. ನಗರ ಪಾಲಿಕೆಗಳು ನಿರ್ವಹಿಸಬೇಕಾದ ಕಾರ್ಯಗಳನ್ನು ವಿವರಿಸಿ.